AUGUST 30, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಪದ್ಮಶ್ರೀ ಪುರಸ್ಕೃತ, ಖ್ಯಾತ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಗಾಯಕ, ಬಳ್ಳಾರಿಯ ಪಂಡಿತ ಎಂ.ವೆಂಕಟೇಶ ಕುಮಾರ, ಧಾರವಾಡದ ಮಲ್ಲಿಕಾರ್ಜುನ ಮನಸೂರ, ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಅಧ್ಯಕ್ಷರಾಗಿ, ಅಧಿಕಾರ ವಹಿಸಿಕೊಂಡಿದ್ದಾರೆ. ನೂತನ ಸದಸ್ಯರಾಗಿ ಆಯ್ಕೆಗೊಂಡಿರುವ, ಧಾರವಾಡ ಆಕಾಶವಾಣಿಯ ನಿಲಯ ಕಲಾವಿದ ಉಸ್ತಾದ್ ಶಫೀಕ್‌ಖಾನ್, ವಿದುಷಿ ಶಕ್ತಿ ಪಾಟೀಲ ಸೇರಿದಂತೆ, ನಾಡಿನ 7 ಜನ ಕಲಾವಿದರನ್ನು, ಟ್ರಸ್ಟಿನ ಸದಸ್ಯ ಕಾರ್ಯದರ್ಶಿ, ಕುಮಾರ ಬೆಕ್ಕೇರಿ  ಸ್ವಾಗತಿಸಿ, ಅಭಿನಂದಿಸಿದರು. ಪ್ರದೇಶ ಸಮಾಚಾರಕ್ಕಾಗಿ, ಪಂಡಿತ ಎಂ.ವೆಂಕಟೇಶಕುಮಾರ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.**

<><><>

**ಪಂ.ಎಂ.ವೆಂಕಟೇಶ ಕುಮಾರ ಧ್ವನಿ 30 ಸೆಕೆಂದುಗಳು**

<><><>

**ಕೇಂದ್ರ ಸರ್ಕಾರ, ‘ಈರುಳ್ಳಿ’ ಸಂಗ್ರಹಣೆ ಮತ್ತು ಕ್ರಯ-ವಿಕ್ರಯದ ಮೇಲೆ, ಕಣ್ಣಾವಲಿರಿಸಿದೆ. ಸಾಲು-ಸಾಲು ಹಬ್ಬಗಳ ಸಂದರ್ಭದಲ್ಲಿ, ಜನ ಸಾಮಾನ್ಯರಿಗೆ ತೊಂದರೆ ಎದುರಾಗದಂತೆ, ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ ಎಂದು, ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಹಾಗೂ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಹೊಸ ದಿಲ್ಲಿಯಲ್ಲಿ ತಿಳಿಸಿದ್ದಾರೆ. ‘ವ್ಯಾಪಕ ಮಳೆ, ಮಾರುಕಟ್ಟೆಯಲ್ಲಿ ಈರುಳ್ಳಿ ಬೆಲೆ ಏರಿಳಿತ ಹಾಗೂ ಕೆಲ ವರ್ತಕರಿಂದ, ಅಗತ್ಯಕ್ಕಿಂತ ಹೆಚ್ಚು ಈರುಳ್ಳಿ ದಾಸ್ತಾನು, ಸಹಜವಾಗಿ ಮಾರುಕಟ್ಟೆಯಲ್ಲಿ ಕೃತಕ ಅಭಾವ ಸೃಷ್ಟಿ ಸುತ್ತದೆ ಎಂದು, ಸಚಿವ ಜೋಶಿ ಹೇಳಿದ್ದಾರೆ.**

<><><>

**‘ಹುಬ್ಬಳ್ಳಿ-ಜೋಧಪುರ’ ವಿಶೇ  ’ ರೈಲು, ಸೆಪ್ಟೆಂಬರ್ ತಿಂಗಳಿನಿಂದ, ಸಂಚಾರ ಪ್ರಾರಂಭಿಸಲಿದೆ. ಈ ವಿಶೇ  ’ ರೈಲನ್ನು, ಮುಂದಿನ ದಿನಗಳಲ್ಲಿ, ನಿಯಮಿತ ರೈಲನ್ನಾಗಿ ಪರಿವರ್ತನೆಗೊಳಿಸಲಾಗುವುದು ಎಂದು, ಕೇಂದ್ರ ರೇಲ್ವೆ ಖಾತೆ ಸಚಿವ ಅಶ್ವಿನಿ ವೈ ್ಣವ್ ಭರವಸೆ ನೀಡಿದ್ದಾಗಿ, ಎಕ್ಸ್ ಮಾಧ್ಯಮದಲ್ಲಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ. ತಮ್ಮ ಒತ್ತಾಸೆ ಹಾಗೂ ಮನವಿಗೆ ಸ್ಪಂದಿಸಿ, ಸಚಿವ ಅಶ್ವಿನಿ ವೈ ್ಣವ್ ಅವರು ಹುಬ್ಬಳ್ಳಿ-ಜೋಧ್‌ಪುರಕ್ಕೆ ನೇರ ರೈಲು ಸಂಚಾರ ಅನುಮೋದಿಸಿದ್ದಾರೆ ಎಂದು, ಸಚಿವ ಜೋಶಿ, ಕೃತಜ್ಞತೆ ಸಲ್ಲಿಸಿದ್ದಾರೆ. ಹುಬ್ಬಳ್ಳಿ-ಜೋಧಪುರ್ ನೂತನ ರೈಲು, ಸೆಪ್ಟೆಂಬರ್ 28 ರಿಂದ, ಪ್ರತಿ ರವಿವಾರ ಸಂಚರಿಸಲಿದೆ. ಮುಂಗಡ ಟಿಕೆಟ್ ಬುಕಿಂಗ್ ಆರಂಭವಾಗಿದೆ.**

<><><>

ಬೀದರ ಜಿಲ್ಲೆಯ, ವಿಲಾಸಪುರ, ರಾಜನಾಳ, ಚಾಂಬೋಳ್ ಹಾಗೂ ಶ್ರೀಮಂಡಲ ಸೇರಿದಂತೆ, ವಿವಿಧ ಪ್ರವಾಹ ಪೀಡಿತ ಪ್ರದೇಶಗಳಿಗೆ, ಪೌರಾಡಳಿತ ಖಾತೆ ಸಚಿವ, ರಹೀಮ್‌ಖಾನ್ ಭೇಟಿ ನೀಡಿದರು. ಕಂದಾಯ, ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳು, ಹಾನಿ ಸಮೀಕ್ಷಿಸಿ, ಕೂಡಲೇ ವರದಿ ಸಲ್ಲಿಸುವಂತೆ, ಸಚಿವರು ಸೂಚಿಸಿದರು. ಹೆಸರು, ಸೋಯಾಬೀನ್, ಟೊಮೆಟೊ ಬೆಳೆಗಳು ಸಂಪೂರ್ಣ ಹಾನಿಗೀಡಾಗಿವೆ.

<><><>

ಡೋಣಿ ನದಿ ಪ್ರವಾಹ ನಿಯಂತ್ರಿಸಲು, ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು, ವಿಜಯಪುರ ಜಿಲ್ಲಾಧಿಕಾರಿ ಆನಂದ ಹಾಗೂ ಜಿಲ್ಲಾ ಪಂಚಾಯಿತಿ ಸಿ.ಇ.ಓ. ರಿಷಿ ಆನಂದ, ಸಾರವಾಡ ಗ್ರಾಮದ ಸೇತುವೆಗೆ ಭೇಟಿ ನೀಡಿ ಪರಿಶೀಲಿಸಿದರು.

<><><>

'ಸಮ್ಯಕ್ ದರ್ಶನ, ಜ್ಞಾನ ಚಾರಿತ್ರಾಣಿ, ಮೋಕ್ಷ ಮಾರ್ಗ' ಎಂಬುದು, ಜೈನ ಧರ್ಮದ ಸಾರ: ತತ್ವ ಸಿದ್ಧಾಂತಗಳ ಬಗ್ಗೆ ನಂಬಿಕೆ, ತಿಳಿವಳಿಕೆ ಹಾಗೂ ಆಚರಣೆಯಿಂದ, ಮೋಕ್ಷ ಪ್ರಾಪ್ತಿ ಎಂದು, ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ, ಡಿ.ವೀರೇಂದ್ರ ಹೆಗ್ಗಡೆ ಹೇಳಿದ್ದಾರೆ. ದಕ್ಷಿಣಕನ್ನಡ ಜಿಲ್ಲೆ, ಧರ್ಮಸ್ಥಳದಲ್ಲಿ, ಜೈನ ಮಠಗಳ ಭಟ್ಟಾರಕರ ನೇತೃತ್ವದಲ್ಲಿ ಜರುಗಿದ, 'ಧರ್ಮ ಸಂರಕ್ಷಣಾ ಸಮಾವೇಶ'ದ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು. ಸಾಹಿತಿ ಹಂ.ಪ.ನಾಗರಾಜಯ್ಯ ಪಾಲ್ಗೊಂಡಿದ್ದರು.

<><><>

ಬಿಜೆಪಿ, ಸೆಪ್ಟೆಂಬರ್ 1 ರಂದು, ಧರ್ಮಸ್ಥಳ ಚಲೋ ಆಯೋಜಿಸಿದೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಹುಬ್ಬಳ್ಳಿಯಲ್ಲಿ ತಿಳಿಸಿದ್ದಾರೆ. ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಈ ಹೋರಾಟದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

<><><>

ವಲಸೆ ಹಕ್ಕಿಗಳ ವಿಶ್ರಾಮ ತಾಣ ಹಾಗೂ ಇರುನೆಲೆ, ಮಂಡ್ಯ ಜಿಲ್ಲೆ ಮದ್ದೂರು ತಾಲೂಕು, ಕೊಕ್ಕರೆ ಬೆಳ್ಳೂರನ್ನು, ಪ್ರೇಕ್ಷಣೀಯ ತಾಣವಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದು, ಶಾಸಕ ಕೆ.ಎಂ. ಉದಯ ತಿಳಿಸಿದ್ದಾರೆ. ಕೊಕ್ಕರೆ ಬೆಳ್ಳೂರಿನಲ್ಲಿ ಪಶು ಚಿಕಿತ್ಸಾಲಯ ಉದ್ಘಾಟಿಸಿ, ಮಾತನಾಡಿದರು. ಕೊಕ್ಕರೆ ಬೆಳ್ಳೂರು, ಹಲವು ಪ್ರಭೇಧದ ವಲಸೆ ಪಕ್ಷಿಗಳಿಗೆ, ಆಶ್ರಯ ತಾಣವಾಗಿದೆ. ಪರಿಸರಾಕ್ತರ ಅಧ್ಯಯನಕ್ಕೆ, ಅಗತ್ಯ ಮೂಲಸೌಕರ್ಯ ಕಲ್ಪಿಸಲು, ಪ್ರಸ್ತಾವ ಸಲ್ಲಿಸಲಾಗಿದೆ ಎಂದರು.

<><><>

ಆಕಾಶವಾಣಿಯ ಬಹುಶ್ರುತ, 'ಮನ್ ಕಿ ಬಾತ್'ನ 125ನೇ ಆವೃತ್ತಿ, ನಾಳೆ ಭಾನುವಾರ, ಬೆಳಗ್ಗೆ 11 ಗಂಟೆಗೆ ಪ್ರಸಾರವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೇಶ-ವಿದೇಶಗಳ ಭಾರತೀಯರೊಂದಿಗೆ, ತಮ್ಮ ಮನದ ಮಾತು, ಹಂಚಿಕೊಳ್ಳಲಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎ.ಐ.ಆರ್. ನ್ಯೂಸ್ ಜಾಲತಾಣ ಹಾಗೂ ನ್ಯೂಸ್ ಆನ್ ಏರ್ ಮೊಬೈಲ್ ಆಪ್‌ನಲ್ಲಿ ಸಹ, ಪ್ರಸಾರವಾಗಲಿದೆ.

<><><>

ಹಲವು ಪ್ರಕರಣಗಳ ಪ್ರಮುಖ ಆರೋಪಿ, ರಮೇಶ್ ಕಿಲ್ಲಾರ್, ಇಂದು ಬೆಳಗ್ಗೆ, ಬೆಳಗಾವಿ ಜಿಲ್ಲೆ, ಕಿತ್ತೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ, ಗುಂಡೇಟು ನೀಡಿ, ಬಂಧಿಸಲ್ಪಟ್ಟಿದ್ದಾಗಿ, ವರದಿ ತಿಳಿಸಿದೆ. ಬೆಳಗಾವಿ ಬಿಮ್ಸ್ ಆಸ್ಪತ್ರೆಯಲ್ಲಿ ಆರೋಪಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಪೊಲೀಸ್ ಪೇದೆಯೋರ್ವರನ್ನು ಗಾಯಗೊಳಿಸಿ, ತಪ್ಪಿಸಿಕೊಳ್ಳಲು ಯತ್ನಿಸಿದಾಗ, ಪಿ.ಎಸ್.ಐ. ಪ್ರವೀಣ್ ಗೊಂಗೊಳ್ಳಿ, ಎಚ್ಚರಿಕೆ ನೀಡಿ, ಗುಂಡು ಹಾರಿಸಿದ್ದಾಗಿ, ಪ್ರಾಥಮಿಕ ವರದಿ ತಿಳಿಸಿದೆ.

<><><>

ಧಾರವಾಡ ಜಿಲ್ಲೆ, ಮಾದನಭಾವಿ ಗ್ರಾಮದಲ್ಲಿ ಜರುಗಿದ, ಜನ ಸಂಪರ್ಕ ಸಭೆಯಲ್ಲಿ, ವಿವಿಧ ಇಲಾಖೆಗಳಿಗೆ ಸಂಬಂಧಿಸಿದ, ಒಟ್ಟು 42 ಅರ್ಜಿಗಳನ್ನು ಸ್ವೀಕರಿಸಿ, 23 ಅರ್ಜಿಗಳನ್ನು, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಭುವನೇಶ ಪಾಟೀಲ, ಇತ್ಯರ್ಥ ಪಡಿಸಿದ್ದಾರೆ. ಸರ್ಕಾರದ ವಿವಿಧ ಜನಪರ ಯೋಜನೆಗಳ ಕುರಿತು, ಗ್ರಾಮಸ್ಥರಿಗೆ ಮಾಹಿತಿ ನೀಡಿದ ಅವರು, ಯೋಜನೆಗಳ ಸದುಪಯೋಗ ಪಡೆದುಕೊಳ್ಳುವಂತೆ, ಕೋರಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.